# ಕೊಡಗು ವಿಶ್ವವಿದ್ಯಾಲಯ

No: KU/REG/ACC/2023-24/05

ಕುಲಸಚಿವರ ಕಛೇರಿ
ಜ್ಞಾನಕಾವೇರಿ ಆವರಣ
ಚಿಕ್ಕಅಳುವಾರ - 571232
Date: 24.05.2023

## ಅಧಿಸೂಚನೆ

**ವಿಷಯ:** 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸ್‌ಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಪ್ರವೇಶಾತಿ ಕುರಿತು

**ಉಲ್ಲೇಖ:** 1. ಸಂ: ಇಡಿ 80ಯುಎನ್‌ಇ 2023, ಬೆಂಗಳೂರು, ದಿನಾಂಕ: 23.05.2023
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 24.05.2023

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೊಡಗು ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಳಗೊಂಡ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನೇತರ ಪ್ರಥಮ ದರ್ಜೆ ಮಹಾವಿದ್ಯಾಲಯಗಳಲ್ಲಿ 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಬಿ.ಎ/ಬಿ.ಕಾಂ/ಬಿ.ಎಸ್.ಡಬ್ಲ್ಯೂ/ಬಿ.ಎಸ್ಸಿ/ಬಿಬಿಎ/ಬಿಸಿಎ ಕೋರ್ಸ್‌ಗಳ ಪ್ರವೇಶಾತಿಯನ್ನು ಭಾರತ ಸರ್ಕಾರವು ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನುಸಾರ UG-CBCS (Parent Mangalore University Regulation)ನಲ್ಲಿರುವ ಪ್ರವೇಶಾತಿ ಅರ್ಹತೆಯ ಪ್ರಕಾರ ಪ್ರಥಮ ವರ್ಷಕ್ಕೆ ಕಡ್ಡಾಯವಾಗಿ UUCMS ಆನ್‌ಲೈನ್ ತಂತ್ರಾಂಶದಲ್ಲೇ ಅರ್ಜಿಗಳನ್ನು ಆಹ್ವಾನಿಸಿ ಪ್ರವೇಶಾತಿಯನ್ನು ಕೈಗೊಳ್ಳಲು ಸೂಚಿಸಲಾಗಿದೆ.

| | | |
|---|---|---|
| 1. | ಪ್ರವೇಶಾತಿ ಪ್ರಾರಂಭ ದಿನಾಂಕ | 22.05.2023 |
| 2. | ಪ್ರವೇಶಾತಿ ದಂಡಶುಲ್ಕ ರಹಿತ ಕೊನೆಯ ದಿನಾಂಕ | 15.07.2023 |
| 3. | ಪ್ರವೇಶಾತಿ ದಂಡಶುಲ್ಕ ಸಹಿತ ಕೊನೆಯ ದಿನಾಂಕ | 31.07.2023 |

ಮೇಲಿನ ಪ್ರವೇಶಾತಿ ದಿನಾಂಕಗಳನ್ನು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ವೆಬ್‌ಸೈಟ್ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ವಿದ್ಯಾರ್ಥಿಗಳು ಹಾಗೂ ಪೋಷಕರ ಗಮನಕ್ಕೆ ತರಲು ಸೂಚಿಸಲಾಗಿದೆ.

**ಪ್ರಾಂಶುಪಾಲರುಗಳಿಗೆ/ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಮಹಾವಿದ್ಯಾಲಯಗಳು ಎಲ್ಲಾ ಸ್ನಾತಕ ತರಗತಿಗಳ ಪ್ರವೇಶ ಮಿತಿ (Intake) ಸಂಖ್ಯೆಗಳು ವಿಶ್ವವಿದ್ಯಾಲಯ ಅನುಮೋದನೆ ಮಾಡಿದ ಸಂಖ್ಯೆಗೆ ಮೀರಬಾರದು.
2. ಪ್ರಥಮ ಪದವಿ ತರಗತಿಗಳಿಗೆ ಪಡೆದ ಪ್ರವೇಶವು ತಾತ್ಕಾಲಿಕವಾಗಿದ್ದು, ಅದು ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ಪತ್ರದ ದೃಢೀಕರಣ ನಂತರವೇ ಖಚಿತಪಡಿಸುವುದು.
3. ಎ) ಕರ್ನಾಟಕ ಸರ್ಕಾರದ ಪಿ.ಯು. ಮಂಡಳಿಯಿಂದ ನೇರವಾಗಿ ಪರೀಕ್ಷೆ ಬರೆದು ಉತ್ತೀರ್ಣಗೊಂಡ **ವಿದ್ಯಾರ್ಥಿಗಳಿಗೆ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ** ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಿಂದ ಯಾವುದೇ ರೀತಿಯ ಪ್ರಮಾಣ ಪತ್ರಗಳ ಅವಶ್ಯಕತೆ ಇಲ್ಲದೇ ಪ್ರವೇಶಾತಿ ಮಾಡಿಕೊಳ್ಳಬಹುದಾಗಿದೆ.

ಬಿ) ಕರ್ನಾಟಕ ರಾಜ್ಯದ ಪಿ.ಯು ಬೋರ್ಡ್, ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅರ್ಹತಾ ಪ್ರಮಾಣ ಪತ್ರ ಅವಶ್ಯಕತೆಯಿರುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಡಿಪ್ಲೋಮಾ/ ಎರಡು ವರ್ಷದ ಐ.ಟಿ.ಐ/ಜೆ.ಒ.ಸಿ/ಜೆ.ಒ.ಡಿ.ಸಿ. ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ರೂ 1000/-, ಅನ್ಯರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ/ ಅನ್ಯ ಮಂಡಳಿ/ಪರೀಕ್ಷಾ ಮಂಡಳಿಗಳಿಂದ (10+2) ಉತ್ತೀರ್ಣರಾದ ವಿದ್ಯಾರ್ಥಿಗಳು ರೂ 2000/-, ಸಾರ್ಕ್ ದೇಶದ ವಿದ್ಯಾರ್ಥಿಗಳಿಗೆ ರೂ. 20,000/- ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ರೂ 30,000/- ಶುಲ್ಕವನ್ನು ತುಂಬಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ (Eligibility Certificate) ಪಡೆದು ಕಾಲೇಜಿಗೆ ಸಲ್ಲಿಸಿದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು (ವಿಶ್ವವಿದ್ಯಾಲಯದಿಂದ ಪಡೆದಿರುವ ಅರ್ಹತಾ ಪತ್ರಗಳನ್ನು ಪ್ರವೇಶ ಅನುಮೋದನಾ ಪಟ್ಟಿಯ ಜೊತೆ ಕಡ್ಡಾಯವಾಗಿ ಲಗತ್ತಿಸುವುದು). ಮುಂದುವರಿದು ತತ್ಸಮಾನ ಕೋರ್ಸುಗಳಿಂದ ಪ್ರಥಮ ಪದವಿ ಕೋರ್ಸುಗಳಿಗೆ ಪ್ರವೇಶ ನೀಡಲು ಈ ಕೆಳಗಿನ ಕೋಷ್ಟಕದಂತೆ ಪ್ರವೇಶಾತಿ ನೀಡಲು ಸೂಚಿಸಿದೆ.

| ಕ್ರ ಸಂ. | ತತ್ಸಮಾನ (10+2) ಕೋರ್ಸುಗಳು | ಪ್ರಥಮ ವರ್ಷದ ಸ್ನಾತಕ ಕೋರ್ಸುಗಳ ಪ್ರವೇಶಕ್ಕೆ ವಿತರಿಸುವ ಅರ್ಹತಾ ಪ್ರಮಾಣ ಪತ್ರ ಕೋರ್ಸ್ ವಿವರ |
|---|---|---|
| 01 | ಐ.ಟಿ.ಐ (10+2) | ಬಿ.ಎ/ಬಿ.ಕಾಂ/ಬಿಬಿಎ/ಬಿ.ಸಿ.ಎ/ಬಿ.ಎಸ್.ಡಬ್ಲ್ಯು |
| 02 | ಜೆ.ಒ.ಡಿ.ಸಿ | ಬಿ.ಎ/ಬಿ.ಎಸ್.ಡಬ್ಲ್ಯು |
| 03 | ಯಾವುದೇ ಡಿಪ್ಲೋಮಾ | ಬಿ.ಎ/ಬಿ.ಸಿ.ಎ/ಬಿಬಿಎ/ಬಿ.ಎಸ್ ಡಬ್ಲ್ಯು |
| 04 | ಡಿಪ್ಲೋಮಾ | ಬಿ.ಎ/ಬಿ.ಎಸ್ಸಿ/ಬಿ.ಎಸ್.ಡಬ್ಲ್ಯು |
| 05 | ರಾಜ್ಯದ (ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ವಿವಿಧ ಶೈಕ್ಷಣಿಕ ಮಂಡಳಿಗಳಿಂದ ತೇರ್ಗಡೆಯಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಪ್ರವೇಶ ಪೂರ್ವದಲ್ಲಿ ಅರ್ಹತಾ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. | ವಿದ್ಯಾರ್ಥಿ ಬಯಸಿದ ಪ್ರಥಮ ವರ್ಷದ ಪದವಿ ಕೋರ್ಸ್‌ಗೆ ಸದರಿ ವಿದ್ಯಾರ್ಥಿಯ ನಿಕಾಯ ಮತ್ತು ವಿಷಯಕ್ಕೆ ಅನುಗುಣವಾಗಿ ಪ್ರವೇಶ ನೀಡುವುದು. |

ಸಿ) ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ/ ಅನ್ಯ ಮಂಡಳಿ/ ರಾಜ್ಯಗಳ/ ದೇಶಗಳ ಪರೀಕ್ಷಾ ಮಂಡಳಿಗಳ 10+2/ ಡಿಪ್ಲೋಮಾ/ ಎರಡು ವರ್ಷದ ಐ.ಟಿ.ಐ/ ಜೆ.ಒ.ಡಿ.ಸಿ.ರಲ್ಲಿ ಉತ್ತೀರ್ಣರಾದಲ್ಲಿ, ಅವರು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ (Eligibility Certificate)ವನ್ನು ಪಡೆಯದೇ ಪ್ರವೇಶಾತಿಯನ್ನು ಒದಗಿಸಿದಲ್ಲಿ ಅಂತಹ ಪ್ರವೇಶಾತಿಗೆ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

4. ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಿಂದಿನ ಮಹಾವಿದ್ಯಾಲಯಗಳ ಮೂಲ ವರ್ಗಾವಣೆ ಪತ್ರಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ ಸಲ್ಲಿಸಬೇಕು.

ವ್ಯಾಸಂಗ ನಿಲುಗಡೆಗೊಂಡ ಹಳೆಯ ವಿದ್ಯಾರ್ಥಿಗಳಲ್ಲಿ ಮರುಪ್ರವೇಶ ನೀಡುವ ಮುನ್ನ ವಿಶ್ವವಿದ್ಯಾಲಯದ ಪರಿನಿಯಮಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಕಡ್ಡಾಯ. ಅಂತಹ ವಿದ್ಯಾರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ಶುಲ್ಕ ಸಹಿತ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ಅನುಮತಿ ಪಡೆಯದೇ ಪ್ರವೇಶ ನೀಡಿದಲ್ಲಿ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳೇ ಹೊಣೆಗಾರರಾಗಿರುತ್ತಾರೆ.

5. ಸರಕಾರ/ವಿಶ್ವವಿದ್ಯಾಲಯ ಮುಂದಿನ ದಿನಗಳಲ್ಲಿ ಈ ಶೈಕ್ಷಣಿಕ ವೇಳಾಪಟ್ಟಿಯನ್ನು ಒಂದು ವೇಳೆ ಬದಲಾವಣೆ ಮಾಡಿದಲ್ಲಿ ಇದು ಬದಲಾವಣೆಗೆ ಒಳಪಡಬಹುದು.

**ವಿಶೇಷ ಸೂಚನೆ:**

1. ಪ್ರವೇಶಾತಿಯ ಕಡೆಯ ದಿನಾಂಕಗಳು ಮುಗಿದ ನಂತರ, ಯಾವುದೇ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ರವಾನೆ (Forward) ಮಾಡಬಾರದಾಗಿ ಈ ಮೂಲಕ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸಿದೆ. ಪ್ರವೇಶ ಪ್ರಕ್ರಿಯೆಗಳನ್ನು ಕಡೆಯ ದಿನಾಂಕದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು.
2. ಹಳೆಯ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ ನಿಯಮಾವಳಿ(Regulations)ಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಕಡ್ಡಾಯ. ಒಂದು ಪಕ್ಷ ವಿಶ್ವವಿದ್ಯಾಲಯದನುಮತಿ ಪಡೆಯದೇ ಪ್ರವೇಶ ನೀಡಿದ ಪಕ್ಷದಲ್ಲಿ, ಮುಂದಿನ ಎಲ್ಲಾ ರೀತಿಯ ವ್ಯಾಜ್ಯ, ದಾವೆ, ಕಟ್ಲೆ(Litigation) ಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ನೇರ ಹೊಣೆಗಾರರಾಗಿರುತ್ತಾರೆ ಎಂದು ಸ್ಪಷ್ಟಪಡಿಸಲಾಗಿದೆ.

3. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಹವಿರುವ ಕಾಲೇಜುಗಳು, ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರ ವಾರ್ಷಿಕ ವರಮಾನಕ್ಕೆ ಅನುಗುಣವಾಗಿ (ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಅಧಿಸೂಚನೆಗಳ ಅನುಸಾರ) SC/ST, OBC ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಬೇಕು. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿವೇತನಕ್ಕೆ ನಿಗದಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಬೇಕು ಮತ್ತು ಪ್ರಾಂಶುಪಾಲರು ಸದ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

ಕುಲಸಚಿವರು (ಪ್ರಭಾರ)

ಕುಲಸಚಿವರು
ಕೊಡಗು ವಿಶ್ವವಿದ್ಯಾಲಯ
ಚಿಕ್ಕ ಅಳುವಾರ-571232
ಕುಶಾಲನಗರ ತಾ., ಕೊಡಗು, ಕರ್ನಾಟಕ

ಪ್ರತಿ:
1. ಕುಲಸಚಿವರು (ಮೌಲ್ಯಮಾಪನ), ಕೊಡಗು ವಿಶ್ವವಿದ್ಯಾಲಯ
2. ಹಣಕಾಸು ಅಧಿಕಾರಿಗಳ ಕಛೇರಿ, ಕೊಡಗು ವಿಶ್ವವಿದ್ಯಾಲಯ
3. ಸಮಾಜ ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ
4. ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಛೇರಿ, ಕೊಡಗು ಜಿಲ್ಲೆ.
5. ಪ್ರಬಂಧಕರು, ಕೆನರಾ ಬ್ಯಾಂಕ್, ಹೆಬ್ಬಾಲೆ, ಕೊಡಗು ಜಿಲ್ಲೆ.
6. ಮಾನ್ಯ ಕುಲಪತಿಯವರ ಆಪ್ತಕಾರ್ಯದರ್ಶಿಗಳು ಹಾಗೂ ಕುಲಸಚಿವರ ಆಪ್ತ ಸಹಾಯಕರು, ಕೊಡಗು ವಿಶ್ವವಿದ್ಯಾಲಯ
7. ಕಛೇರಿ ಪ್ರತಿ